ಸುಧಾರಿಸಬೇಕಾಗುತ್ತದೆ. ಇದರ ಜೊತೆ ಚರ್ಮವೂ ಬದಲಾಗುತ್ತದೆ. ಅದರ ದಪ್ಪ ಕುಸಿಯುತ್ತದೆ, ಸ್ಥಿತಿ ಸ್ಥಾಪಕತೆ ಕಡಿಮೆಯಾಗುತ್ತದೆ. ಹೊರಗಣ್ಣಿಗೆ ಚರ್ಮದ ಸುಕ್ಕುಗಳು ಕಾಣಿಸಿಕೊಳ್ಳುತ್ತವೆ. ಚರ್ಮ ಜಗ್ಗುತ್ತದೆ, ಕಣ್ಣಕೆಳಗೆ ಸಣ್ಣ ಮೂಟೆಗಳು ಮೂಡುತ್ತವೆ.

ಇದು ವ್ಯಕ್ತಿಯಿಂದ ವ್ಯಕ್ತಿಗೆ ಅವರ ಮುಖದ ವಯಸ್ಸಿಗೆ, ಅಭಿವ್ಯಕ್ತಿಗಳಿಗೆ ಅನುಗುಣವಾಗಿ ಭಿನ್ನವಾಗಿರ ಬಹುದು. ಮುಖಕ್ಕೆ ವಯಸ್ಸಾಗುವುದು ಬಹಳ ಬೇಗ ಆರಂಭವಾಗಿ ಬಿಡುತ್ತದೆ. ದೇಹದ ಇತರೆ ಭಾಗಗಳನ್ನು ನಾವು ಬಟ್ಟೆ, ಪಾದರಕ್ಷೆಗಳಲ್ಲಿ, ಕೈಗವಚ, ಶಾಲುಗಳಲ್ಲಿ ಹಲವು ಬಾರಿ ಮುಚ್ಚಿಟ್ಟು ರಕ್ಷಿಸುತ್ತೇವೆ! ಆದರೆ ಮುಖ ಪ್ರಕೃತಿಯ ಎಲ್ಲ ವಿಕೋಪಗಳಿಗೂ ತೆರೆದ ಹಾಳೆಯಾಗಿ ಹಲವಾರು ದಾಳಿಗೆ ತುತ್ತಾಗುತ್ತದೆ. ಮೇಕಪ್ಪಿನಲ್ಲಿ ಪ್ರತಿದಿನ ಹಲವು ಗಂಟೆಗಳ ಕಾಲ ಮುಳುಗಿರುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಮುಖದಲ್ಲಾಗುವ ಬದಲಾವಣೆ ನಮ್ಮ ಗಮನಕ್ಕೆ ಬರುತ್ತದೆ!

ಎಲ್ಲರಿಗೂ ಒಂದಲ್ಲ ಒಂದು ದಿನ ವಯಸ್ಸಾಗುತ್ತದೆ. ಚರ್ಮದ ಕಾಂತಿ ಮತ್ತು ಬಣ್ಣ ಕುಸಿಯುತ್ತದೆ. ಕೆಲವರಿಗೆ ಇದರ ಅರಿವು ಕಡಿಮೆಯಿರುತ್ತದೆ. ಇನ್ನು ಕೆಲವರಲ್ಲಿ ಪ್ರತಿ ಸುಕ್ಕು, ನಿರಿಗೆಗಳು ಮೂಡಿದಾಗ ಅವರ ರಾತ್ರಿಯ ನಿದ್ದೆ ಕೆಡುತ್ತದೆ! ಕೆಲವರಲ್ಲಿ ಚರ್ಮ ನಿಧಾನವಾಗಿ ಸುಕ್ಕಾಗುತ್ತದೆ. ಮತ್ತೆ ಕೆಲವರಲ್ಲಿ ಬೇಗನೆ ಆಗುತ್ತದೆ. ನಾವು ಅಳವಡಿಸಿಕೊಳ್ಳುವ ಆರೋಗ್ಯಕರ ಅನಾರೋಗ್ಯಕರ ಜೀವನ ಶೈಲಿಯೂ ಇದರಲ್ಲಿ ಪಾತ್ರ ವಹಿಸುತ್ತದೆ!

## ಮುಖಕ್ಕೆ ವಯಸ್ಸಾಗುವುದು ಹೇಗೆ?

ಕಾಂತಿ ಕಡಿಮೆಯಾಗುವುದು. ಚರ್ಮ ಕಪ್ಪಗಾಗುವುದು. ಸುಕ್ಕು, ನಿರಿಗೆಗಳು ಬರುವುದು. ನಿರಿಗೆಗಳು ಆಳವಾಗುವುದು. ಏನನ್ನೂ ಅಭಿವ್ಯಕ್ತಿಸದಿದ್ದರೂ ರೇಖೆಗಳು ಶಾಶ್ವತವಾಗಿ ಮೂಡುವುದು. ಚರ್ಮದ ಬಿಗಿ ಕಡಿಮೆಯಾಗುವುದು, ಮೂಗು ದಪ್ಪಗಾಗುವುದು. ಚರ್ಮದಲ್ಲಿ ಚುಕ್ಕೆಗಳು ಮೂಡುವುದು ಇತ್ಯಾದಿ ನಮ್ಮ ಬರಿಕಣ್ಣಿಗೆ ಕಾಣುವಂತವು.

ಇದರ ವೈಜ್ಞಾನಿಕ ಕ್ರಿಯೆಯನ್ನು ಅರ್ಥ ಮಾಡಿಕೊಳ್ಳಲು ಮುಖದ ಮೂರು ಭಾಗಗಳನ್ನು ವೈದ್ಯರು ಪರಿಗಣಿಸುತ್ತಾರೆ. ಮುಖದ ಮೇಲ್ಭಾಗ, ನಡುಭಾಗ ಮತ್ತು ಕೆಳ ಭಾಗ.

ಹಣೆಯಲ್ಲಿ ನಿರಿಗೆಗಳು ಜಾಸ್ತಿಯಾಗುವುದು, ಹುಬ್ಬುಗಳು ತಮ್ಮ ಕಮಾನನ್ನು ಕಳೆದುಕೊಂಡು ಕುಸಿಯುವುದು, ಹುಬ್ಬುಗಳ ನಡುವೆ ಕೋಪದ/ಚಿಂತೆಯ ಗೆರೆಗಳು ಮೂಡುವುದನ್ನು ಕಾಣುತ್ತೇವೆ. ಹೆಂಗಸು, ಗಂಡಸರಿಬ್ಬರಲ್ಲೂ ಕೂದಲು ಹಿಂದಕ್ಕೆ ಸರಿಯುತ್ತದೆ. ಆದರೆ, ಗಂಡಸರಲ್ಲಿ ಇದು ಅವರಲ್ಲಿ ಮಾತ್ರ ಕಾಣುವ ಬಕ್ಕಾಗುವ ಮೊದಲ ಲಕ್ಷಣವಾಗಿರಬಹುದು

ನಡುಭಾಗದಲ್ಲಿ, ಕೆನ್ನೆಯ ಕೊಬ್ಬು ಕರಗಿ ಕೆಳಗೆ ಜಗ್ಗುತ್ತದೆ. ಯೌವನದಲ್ಲಿನ ಕಣ್ಣ ಸುತ್ತಿನ ಕೊಬ್ಬು ಕರಗಿ ಕಣ್ಣ ಕೆಳಗೆ ಮೂಟೆಗಳು ಕಾಣಿಸುತ್ತವೆ, ಮೂಗು ಮತ್ತು ಬಾಯಿಯ ನಡುವಿನ ನಿರಿಗೆ ಆಳವಾಗುತ್ತದೆ. ಕಣ್ಣ ಸುತ್ತಿನ ಮಜ್ಜೆ ಕರಗಿ ಚರ್ಮ ತೆಳ್ಳಗಾಗುತ್ತದೆ.

ಮುಖದ ಕೆಳಭಾಗದಲ್ಲಿ ತುಟಿಯ ಸುತ್ತ ನಿರಿಗೆಗಳು ಕಾಣಿಸುತ್ತವೆ. ತುಟಿಯ ಚರ್ಮ ತೆಳುವಾಗಿ ಕಪ್ಪಗಾಗುತ್ತದೆ. ಕುತ್ತಿಗೆ ಮತ್ತು ಬಾಯಿಯ ಸ್ನಾಯುಗಳು ಬಿಗಿ ಕಳೆದುಕೊಂಡು ಎಳೆದು ನಿಲ್ಲುತ್ತವೆ. ಇವೆಲ್ಲ ನಾವು ಕಾಣುವ ಚರ್ಮದಲ್ಲಿ ಬದಲಾವಣೆಗಳನ್ನು ತೋರಿಸುತ್ತವೆ.



## ಬೊಟಾಕ್ಸ್ ಚಿಕಿತ್ಸೆ ಫಲಕಾರಿಯೇ?

ಮುಖ್ಯವಾಗಿ ಬೊಟಾಕ್ಸನ್ನು ಮುಖದ ಮೇಲು ಭಾಗದಲ್ಲೂ, ಫಿಲ್ಲರ್ ಗಳನ್ನು ಕೆಳ ಮುಖ ಭಾಗದಲ್ಲೂ ಉಪಯೋಗಿಸುತ್ತಾರೆ. ನುರಿತ ಕೈಗಳಲ್ಲಿ ಇದು ನಿಯಮವೇನಲ್ಲ. ಬೊಟಾಕ್ಸ್ ನ ನಿಜ ನಾಮ ಬೊಟುಲಿನಿಯಂ ಟಾಕ್ಸಿನ್. ಇದು ಒಂದು ಬಗೆಯ ಕೆಟ್ಟ ರಾಸಾಯನಿಕ. ಇದುಮೊದಲು ಕಂಡದ್ದು ಸಾಸೇಜ್ (ಹಂದಿ ಮಾಂಸದ ತುಣುಕುಗಳು) ಗಳಲ್ಲಿ. ಇದನ್ನು ವೈದ್ಯಕೀಯ ರಂಗದಲ್ಲಿ ಬಳಸಿದ್ದು 1980 ರಲ್ಲಿ ಕಣ್ಣು ಗುಡ್ಡೆಯ ಚಲನೆಯ ತೊಂದರೆಯಿರುವ ಜನರಲ್ಲಿ. 1990 ರಲ್ಲಿ ಲಕ್ವ ಹೊಡೆದ ರೋಗಿಗಳ ಚಿಕಿತ್ಸೆಗೆ ಬಳಸಲಾಯ್ತು.2002 ರಲ್ಲಿ ಇದನ್ನು ಸೌಂದರ್ಯವರ್ಧಕ ಚಿಕಿತ್ಸೆಗಳಲ್ಲಿ ಬಳಸಬಹುದೆಂದು ಒಪ್ಪಿಗೆ ದೊರೆಯಿತು. ವ್ಯಾಪಾರದಲ್ಲಿ ಇದಕ್ಕೆ ಹಲವು ಬೇರೆ ಬೇರೆ ಹೆಸರುಗಳಿವೆ.

ಹಣೆಯ ಮಧ್ಯೆ ಉಪಯೋಗಿಸಲು ಮಾತ್ರ ಈ ರಾಸಾಯನಿಕಕ್ಕೆ ಲೈಸೆನ್ಸ್/ಪರವಾನಗಿ ಇರುವುದು. ಮಿಕ್ಕ ಜಾಗಗಳಲ್ಲಿ ಇದಕ್ಕೆ ಆಫ್‌ಲೈಸೆನ್ಸ್ ಮಾತ್ರ ಇರುವುದು. ಇದು ಕೆಲಸ ಮಾಡುವುದು ಇದನ್ನು ಇಂಜೆಕ್ಷನ್ ಮೂಲಕ ನೀಡಿ ಸ್ನಾಯುಗಳನ್ನು ದುರ್ಬಲಗಳಿಸುವುದರ ಮೂಲಕ. ಬದುಕಿನಲ್ಲಿ ನಾವು ಬಹು ಬಾರಿ ಹುಬ್ಬು ಗಂಟಿಕ್ಕುವ ಸಂದರ್ಭಗಳಿರುತ್ತವೆ, ಗೊತ್ತಿದ್ದೋ, ಗೊತ್ತಿಲ್ಲದೆಯೋ ನಾವು ಇದನ್ನು ಮಾಡುತ್ತಿರುತ್ತೇವೆ. ಅದೇ ರೀತಿ ಕೆಲಸಗಳಲ್ಲಿ ಆಳವಾದ ತನ್ಮಯತೆಯನ್ನು ತೋರುವಾಗ ಕೂಡ ಹುಬ್ಬು ಗಂಟಿಕ್ಕುತ್ತೇವೆ. ಇದರಿಂದ ಉಂಟಾಗುವ ಕೋಪದ ಆಳ ನಿರಿಗೆಗಳು ನಮ್ಮನ್ನು ವಯಸ್ಸಾದವರಂತೆ ಕಾಣಿಸುವಂತೆ ಮಾಡುತ್ತವೆ. ಇಂತಹ ಸ್ನಾಯುಗಳ ಬಲವನ್ನು ಈ ರಾಸಾಯನಿಕ ದುರ್ಬಲಗೊಳಿಸುತ್ತದೆ. ಸ್ವಲ್ಪಕಾಲಕ್ಕೆ ನಿಸ್ತೇಜಗೊಳಿಸುತ್ತದೆ. ಈ ರಾಸಾಯನಿಕದ ಸೂಕ್ತ ಮತ್ತು ನಿಯಂತ್ರಿತ ಬಳಕೆಯಿಂದ ಇದು ಜನರನ್ನು ಸದಾ ಹಸನ್ಮುಖಿಗಳಂತೆ ಕಾಣುವಂತೆ ಮಾಡುತ್ತದೆ. ಮುಖ ಸಿಂಡರಿಸಿದರೂ ನಿರಿಗೆ ಕಾಣುವುದಿಲ್ಲ. ಒಮ್ಮೆ ಬಳಸಿದ ನಂತರ 3–6 ತಿಂಗಳ ಕಾಲ ಇದರ ಪರಿಣಾಮ ಇರುತ್ತದೆ. ನಂತರ ಸ್ನಾಯುಗಳು ತಮ್ಮ ಶಕ್ತಿಯನ್ನು ಮರಳಿ ಪಡೆಯುತ್ತವೆ.ಆಗ ಮತ್ತೆ ಇದರ ಇಂಜೆಕ್ಷನ್ ನೀಡಬೇಕಾಗುತ್ತದೆ. ಇತರೆ ಮುಖದ ಭಾಗದಲ್ಲೂ ಇದರ ಬಳಕೆ ಇದೇ ರೀತಿಯದು.

ಇದಕ್ಕೆ ವೈದ್ಯಕೀಯ ರಂಗದಲ್ಲಿ ಇತರೆ ಉಪಯೋಗಗಳೂ ಇವೆ. ಜಾಸ್ತಿ ಬೆವರದಂತೆ ಕಂಕುಳಲ್ಲಿನ ಬೆವರು ಗ್ರಂಥಿಗಳನ್ನು ನಿಷ್ಕ್ರಿಯಗೊಳಿಸುವಲ್ಲಿ, ನಿಯಂತ್ರಣವಿಲ್ಲದೆ ಹಲ್ಲನ್ನು ಮಸೆಯುವ ವ್ಯಾಧಿಯಿರುವವರಲ್ಲಿ ಕೂಡ ಇದನ್ನು ಬಳಸುತ್ತಾರೆ. ಇದನ್ನು ತೊಂದರೆಯಿಲ್ಲದೆ ಉಪಯೋಗಿಸಬಹುದಾದರೂ, ಇದಕ್ಕೂ ಹಲವು ಇತರೆ ದುಷ್ಪರಿಣಾಮಗಳಿವೆ. ಹಾಗಾಗಿ ಸೂಕ್ತ ತರಬೇತಿ ಹೊಂದಿದ ವೈದ್ಯ, ದಂತವೈದ್ಯರು ಮಾತ್ರ ಇದನ್ನು ನಿಮಗೆ ನೀಡಬಹುದು.

## ಫಿಲ್ಲರ್‌ಗಳು

ಫಿಲ್ಲರ್ ಗಳು ಕೂಡ ಹಲವು ಹೆಸರುಗಳಲ್ಲಿ ಲಭ್ಯವಿವೆ. ಹಲವು ಫಿಲ್ಲರ್ ಗಳನ್ನು ಮುಖದ ಸೌಂದರ್ಯ ವರ್ಧನೆಗೆ ಬಳಸುತ್ತಾರಾದರೂ ತುಂಬ ಜನಪ್ರಿಯವಾದದ್ದು ಹೈಯಲ್ಯುರೋನಿಕ್ ಆಸಿಡ್ ಎಂಬುದು. ಹೈಯಲ್ಯುರೋನಿಕ್ ಆಸಿಡ್ ಅನ್ನು ಕಣ್ಣಿನ ಒಂದು ಅಂಗದಲ್ಲಿ ಮೊದಲು ವಿಜ್ಞಾನಿಗಳು ಕಂಡುಕೊಂಡರಾದರೂ ನಂತರ ಚರ್ಮದಲ್ಲೇ ಇದು ಸಹಜವಾಗಿ ಇರುವುದು ದೃಢಪಟ್ಟಿತು.

ತುಟಿಗಳ ಆಕಾರ ಮತ್ತು ಗಾತ್ರಗಳನ್ನು ಬದಲಾಯಿಸಲು, ತುಟಿಗಳಿಗೆ ಮೀನಿನ ಆಕಾರದ ಸೆಕ್ಸಿ ಲುಕ್ ನೀಡಲು, ಮೂಗು ಮತ್ತು ತುಟಿಗಳ ನಡುವಿನ ನಿರಿಗೆ, ತುಟಿ ಮತ್ತು ಗಲ್ಲದ ನಡುವಿನ ನಿರಿಗೆಗಳನ್ನು ಕಡಿಮೆ ಮಾಡಲು ಇದನ್ನು ಮುಖ್ಯವಾಗಿ ಬಳಸುತ್ತಾರೆ.

ಕೊಲಾಜಿನ್‌ಗಳ ರೂಪದಲ್ಲಿ ದೊರೆವ ಫಿಲ್ಲರ್‌ಗಳ ದುಷ್ಪರಿಣಾಮ ಹಲವಿರುವುದರಿಂದ ಹೈಯಲ್ಯುರೋನಿಕ್ ಆಸಿಡ್ ಫಿಲ್ಲರ್ ಗಳ ಬಳಕೆ ಅತಿ ಸಾಮಾನ್ಯವಾಗಿದೆ.